


# सरयू ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

ಸಂಪುಟ-2 | ಸಂಚಿಕೆ 7 | 5114/ನಂದನ ಸಂ। | ಭಾದ್ರಪದ/ಸಪ್ಟೆಂಬರ್ 2012 | ಪುಟಗಳು : 8


## ವಿಶ್ವವಂದ್ಯೆ ಜಗಜ್ಜನನಿ ನಮೋ ತಾಯಿ ಭಾರತಿ

**ಶ್ರೀರಾಮ** ವಿದ್ಯಾಕೇಂದ್ರದ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳು ಅಧ್ಯಾಪಕ-ಅಧ್ಯಾಪಕೇತರರು ಸೇರಿ ಆಚರಿಸಿದ ದೇಶದ 66ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಬಾಳ್ತಿಲ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಲಕ್ಷ್ಮೀ ಗೋಪಾಲಾಚಾರ್ಯ ಧ್ವಜಾರೋಹಣದೊಂದಿಗೆ ನೆರವೇರಿಸಿದರು. ನಂತರ ವಿವಿಧ ವಿಭಾಗಗಳಲ್ಲಿ ಸಭಾ ಕಾರ್ಯಕ್ರಮಗಳು ನಡೆದವು.

ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗದ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಸತೀಶ್ ಭಟ್ ಶಿವಗಿರಿ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ನೇಹಾ ಮಾತಾಜಿ ಸ್ವಾತಂತ್ರ್ಯ ದಿನಾಚರಣೆಯ ಬಗ್ಗೆ ಮಾತನಾಡಿದರು. ಮುಖ್ಯೋಪಾಧ್ಯಾಯ ಶ್ರೀ ರವಿರಾಜ ಉಪಸ್ಥಿತರಿದ್ದರು.

ಪ್ರೌಢಶಾಲಾ ವಿಭಾಗದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪುತ್ತೂರು ಜಿಲ್ಲಾ ಬೌದ್ಧಿಕ್ ಪ್ರಮುಖ್ ಶ್ರೀ ಸುರೇಶ್ ಪರ್ಕಳ ಭಾಗವಹಿಸಿ "ರಾಷ್ಟ್ರೀಯ ಚಿಂತನೆಯೊಂದಿಗೆ ದೇಶ ಭಕ್ತರ ಸ್ಮರಣೆ ಮಾಡುವ ಹಾಗೂ ಅಖಂಡ ಭಾರತದ ಸಂಕಲ್ಪ ಕೈಗೊಳ್ಳುವ ದಿನವಿದು" ಎಂದರು. ಉಪನ್ಯಾಸಕ ಶ್ರೀ ರಾಜಾರಾಮ ವರ್ಮ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮುಖ್ಯೋಪಾಧ್ಯಾಯ ಶ್ರೀ ವಸಂತ ಮಾಧವ ಉಪಸ್ಥಿತರಿದ್ದರು. ಅಖಂಡ ಭಾರತ ದರ್ಶನವೆಂಬ ಕಾರ್ಯಕ್ರಮವನ್ನು ವಿದ್ಯಾರ್ಥಿಗಳು ನಡೆಸಿಕೊಟ್ಟರು.

ಪದವಿಪೂರ್ವ ವಿದ್ಯಾಲಯ ವಿಭಾಗದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಆಂಗ್ಲ ಭಾಷಾ ಉಪನ್ಯಾಸಕಿ ಶ್ರೀಮತಿ ರೇವತಿ ಬಿ.ಆರ್. ಮಾತನಾಡಿದರು. ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಸಾಯಿ ಪ್ರಸಾದ್ ಆಳ್ವ, ಹರ್ಷವರ್ಧನ, ಶ್ರೀ ಗಣೇಶ ನಿರ್ವಹಿಸಿದರು.




**ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ.)**

ಹನುಮಾನ್ ನಗರ, ಕಲ್ಲಡ್ಕ. ಬಂಟ್ವಾಳ ತಾಲೂಕು, ದ.ಕ. 574 222. ದೂ. : 08255-275183

Email: info@srvk.org website: www.srvk.org Fax: 08255-275183

**ಚಿಂತನರಶ್ಮಿ**

# ಸತ್ಯವನ್ನು ಮುಚ್ಚಿ ಬಿಡುವ ಬಗೆ

ಮರಿದೆವ್ವ ಏದುಸಿರು ಬಿಡುತ್ತ ಓಡಿ, ಓಡಿ ಬಂದಿತು. ಮರದ ಕೆಳಗೆ ಹಾಯಾಗಿ ಮಲಗಿ ನಿದ್ರಿಸುತ್ತಿದ್ದ ಹಿರಿ ದೆವ್ವವನ್ನು ಅಲುಗಾಡಿಸಿ ಎಬ್ಬಿಸಿತು. ಮೈಕೊಡವಿಕೊಂಡು ಆಕಳಿಸಿ ಎದ್ದು ಕುಳಿತ ದೆವ್ವ "ಏನದು? ಹೀಗೆ ಓಡಿ ಬರುತ್ತಿದ್ದೀ. ಏನಾಯಿತು? ಏನಾದರೂ ತೊಂದರೆಯಾಗಿದೆಯೇ?" ಆಗ ಮರಿ ದೆವ್ವ "ನೀವೆಲ್ಲ ಹಿರಿಯರು ಹೀಗೆ ಆರಾಮವಾಗಿ ಮಲಗಿದರೆ ಗತಿ ಏನು? ಏನಾಗುತ್ತಿದೆ ಎಂಬುದರ ಕಲ್ಪನೆ ಇದೆಯೇ? ನಮ್ಮ ವಂಶವೇ, ಕುಲವೇ ನಾಶವಾಗುವ ಸ್ಥಿತಿ ಬಂದಿದೆ" ಎಂದಿತು. ಗಾಬರಿಯಿಂದ ಮುಖ ಕೆಂಪು ಮಾಡಿಕೊಂಡು. "ಹೌದೇ? ಅಂತಹದ್ದು ಏನಾಯಿತು? ಹೇಳು" ಎಂದು ಕೇಳಿತು ದೆವ್ವ.

"ನೀವು ಕೇಳಿಲ್ಲವೇ? ಈ ಊರಿನ ಮಹಾತ್ಮರೊಬ್ಬರಿಗೆ ಸತ್ಯದರ್ಶನ ವಾಗಿದೆಯಂತೆ. ಅವರು ಜನರಿಗೆಲ್ಲ ಅದರ ತಿಳಿವು ನೀಡುತ್ತಾರಂತೆ. ನಾವೇನಾದರೂ ತಕ್ಷಣ ಮಾಡಲೇಬೇಕು. ಇಲ್ಲದೇ ಹೋದರೆ ನಮಗೆ ಉಳಿವೇ ಇಲ್ಲ. ನಮ್ಮ ವೃತ್ತಿಯೇ ಅಪಾಯದಲ್ಲಿದೆ. ಆತ ನಮ್ಮ ಕಸುಬಿನ ಮೂಲಬೇರನ್ನೇ ಕತ್ತರಿಸುವ ಹಾಗೆ ಕಾಣುತ್ತಿದೆ"ಎಂದು ಬಡಬಡನೇ ನುಡಿದು ತನ್ನ ಆತಂಕವನ್ನು ತೋಡಿಕೊಂಡಿತು. "ಛೇ ಹುಚ್ಚಾ, ನೀನಿನ್ನೂ ಎಳಸು ಹುಡುಗ. ಅದಕ್ಕೆ ಗಾಬರಿಯಾಗಿದ್ದೀಯ. ನೀನೇನೂ ಚಿಂತೆ ಮಾಡಬೇಡ. ನನಗೂ ಈ ವ್ಯಕ್ತಿಗೆ ಸತ್ಯದರ್ಶನವಾದ ವಿಷಯ ತಿಳಿಯಿತು. ತಕ್ಷಣ ನಮ್ಮ ಜನರನ್ನು ಕೆಲಸಕ್ಕೆ ಬಿಟ್ಟಿದ್ದೇನೆ. ಅವರೆಲ್ಲ ಕೆಲಸ ಪ್ರಾರಂಭ ಮಾಡಿದ್ದಾರೆ. ಆ ಮಹಾತ್ಮ ಏನೂ ಮಾಡುವ ಹಾಗಿಲ್ಲ. ಸ್ವಲ್ಪ ದಿನದಲ್ಲಿ ಜನ ಅವನನ್ನೇ ಹುಚ್ಚ ಎಂದು ಬಿಡುತ್ತಾರೆ" ಎಂದು ಅಭಿಮಾನದಿಂದ ಮರಿ ದೆವ್ವದ ಬೆನ್ನು ತಟ್ಟಿತು ಹಿರಿ ದೆವ್ವ.

"ನಮ್ಮ ಜನ ಕೆಲಸ ಮಾಡುತ್ತಿದ್ದಾರೆಯೇ? ನನಗೆ ಯರೂ ಕಾಣಲಿಲ್ಲ? ಮಹಾತ್ಮನ ವಿಚಾರವಾಗಿ ಬರೀ ಪಂಡಿತರು, ಬುದ್ಧಿಜೀವಿಗಳೇ ಮಾತನಾಡುತ್ತಿದ್ದಾರೆ. ನಮ್ಮವರು ಯಾರೂ ಇಲ್ಲ" ಎಂದಿತು ಮರಿ ದೆವ್ವ. ಗಹಗಹಿಸಿ ನಕ್ಕಿತು ಹಿರಿ ದೆವ್ವ, "ಅಯ್ಯೋ ದಡ್ಡ, ಅವರೇ ನಮ್ಮ ಜನ. ಈ ಮಹಾತ್ಮ ಒಂದು ಮಾತನಾಡಿದರೆ ಬುದ್ಧಿಜೀವಿಗಳು ಪರ, ವಿರೋಧಗಳ ಭಾಷಣಗಳ ಸುರಿಮಳೆ ಮಾಡಿಬಿಡುತ್ತಾರೆ. ಎಷ್ಟೊಂದು ಚರ್ಚೆ ಮಾಡಿಬಿಡುತ್ತಾರೆಂದರೆ ಆ ಗದ್ದಲದಲ್ಲಿ ಮಹಾತ್ಮ ಏನು ಹೇಳಿದ ಎನ್ನುವುದೇ ಯಾರಿಗೂ ತಿಳಿಯುವುದಿಲ್ಲ" ಎಂದು ಹಿರಿ ದೆವ್ವ ತಿಳುವಳಿಕೆ ನೀಡಿತು ಹುಬ್ಬುಗಂಟಿಕ್ಕಿ ಮರಿ ದೆವ್ವ, "ಈ ಬುದ್ಧಿಜೀವಿಗಳು ಯಾರು?" ಎಂದು ಕೇಳಿತು. "ದಡ್ಡಾ, ದಡ್ಡಾ, ಅಷ್ಟು ಗೊತ್ತಿಲ್ಲವೇ? ಸಸ್ಯಗಳನ್ನು, ತಿಂದು ಬದುಕುವವರು ಸಸ್ಯಜೀವಿಗಳು, ಪ್ರಾಣಿಗಳನ್ನು ತಿಂದು ಬದುಕುವವರು ಪ್ರಾಣಿಜೀವಿಗಳು. ಹಾಗೆಯೇ ಮತ್ತೊಬ್ಬರ ಬುದ್ಧಿಯನ್ನು ತಿಂದು ಬದುಕುವವರು ಬುದ್ಧಿಜೀವಿಗಳು. ಅವರ ಕೆಲಸ ಏನಿದ್ದರೂ ಟೀಕೆ, ಟಿಪ್ಪಣಿ ಮಾಡುತ್ತಾ ಜನರನ್ನು ಅನುಮಾನದ ಸುಳಿಯಲ್ಲಿ ಸಿಲುಕಿಸುವುದು. ನಿತ್ಯವೂ ತರ್ಕ, ವಿತರ್ಕಗಳಲ್ಲಿ ಪ್ರಚಾರ ಪಡೆಯುವುದೇ ಅವರಿಗೆ ಮುಖ್ಯ" ಎಂದು ತಿಳಿಸಿತು ಹಿರಿ ದೆವ್ವ. ಮರಿ ದೆವ್ವ ಸಂತೃಪ್ತಿಯ ನಗೆ ಬೀರಿತು.

ಈ ಹಿರಿ ದೆವ್ವ, ಮರಿ ದೆವ್ವಗಳ ಸಂಭಾಷಣೆ ಬಹುಪಾಲು ಸತ್ಯ ಎನಿಸುವುದಿಲ್ಲವೇ?

## ವಿದ್ಯಾಭಾರತಿ ಕರ್ನಾಟಕ ಪ್ರಾಂತೀಯ ಸಾಧಾರಣ ಸಭಾ ಬೈಠಕ್



ವಿದ್ಯಾಭಾರತಿ ಕರ್ನಾಟಕ ಪ್ರಾಂತೀಯ ಸಾಧಾರಣ ಸಭಾ ಬೈಠಕ್ ಆಗಸ್ಟ್ 4 ಮತ್ತು 5 2012ರಂದು ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕದಲ್ಲಿ ಜರಗಿತು. ವಿದ್ಯಾಭಾರತಿ ರಾಜ್ಯಾಧ್ಯಕ್ಷ ಶಿವಯ್ಯಮಠಪತಿ ದೀಪ ಬೆಳಗಿಸಿ ಉದ್ಘಾಟಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಸಂಪರ್ಕ ಪ್ರಮುಖ್ ಡಾ|| ಪ್ರಭಾಕರ ಭಟ್ ಸ್ವಾಗತಿಸಿ ವಿದ್ಯಾಕೇಂದ್ರ ಬೆಳೆದುಬಂದ ದಾರಿಯನ್ನು ಪರಿಚಯಿಸಿದರು. ರಾಜ್ಯಕಾರ್ಯದರ್ಶಿ ಭೀಮರೆಡ್ಡಿ, ಕ್ಷೇತ್ರೀಯ ಸಹಸಂಘಟನಾ ಕಾರ್ಯದರ್ಶಿ ಜಿ. ಆರ್. ಜಗದೀಶ್, ಶ್ರೀರಾಮ ವಿದ್ಯಾಕೇಂದ್ರದ ಅಧ್ಯಕ್ಷ ಬಿ.ನಾರಾಯಣ ಸೋಮಯಾಜಿ, ಜಿಲ್ಲಾ ಹಾಗೂ ರಾಜ್ಯಮಟ್ಟದ ಪದಾಧಿಕಾರಿಗಳು ವೇದಿಕೆಯಲ್ಲಿದ್ದರು. ಪ್ರೌಢಶಾಲೆಯ 810 ವಿದ್ಯಾರ್ಥಿಗಳು ನಡೆಸಿಕೊಟ್ಟ ಸರಸ್ವತೀವಂದನಾ, ವೇದಘೋಷ, ಕಬೀರ್ ದೋಹಾಗಳು ಹಾಗೂ ಬೈಠಕ್‌ಗೆ ಆಗಮಿಸಿದ ಎಲ್ಲರನ್ನು ಕಾಲುತೊಳೆದು ಆರತಿ ಬೆಳಗಿ, ರಕ್ಷೆಕಟ್ಟಿ ಸ್ವಾಗತಿಸಿದ ರೀತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

## ಪ್ರಾಂತಮಟ್ಟದ ವಾಲಿಬಾಲ್ ಥ್ರೋಬಾಲ್ ಪಂದ್ಯಾಟ



ವಿದ್ಯಾಭಾರತಿ ಕರ್ನಾಟಕದ ಪ್ರಾಂತ ಮಟ್ಟದ ವಾಲಿಬಾಲ್ ಥ್ರೋಬಾಲ್ ಪಂದ್ಯಾಟ ಆಗಸ್ಟ್ 16 ಮತ್ತು 17, 2012ರಂದು ವಿದ್ಯಾ-ಕೇಂದ್ರದ ಕ್ರೀಡಾಂಗಣದಲ್ಲಿ ಜರುಗಿತು. ಮಂಗಳೂರು ವಿವಿಯ ಶಾರೀರಿಕ ಶಿಕ್ಷಣ ಸಹ ನಿರ್ದೇಶಕ ಡಾ। ಕಿಶೋರ್‌ಕುಮಾರ್ ಉದ್ಘಾಟಿಸಿದರು. ವೇದಿಕೆಯಲ್ಲಿ ಸಂಸ್ಥೆಯ ಸಂಚಾಲಕರು, ಬಿಜೆಪಿ ಜಿಲ್ಲಾಧ್ಯಕ್ಷ ಶ್ರೀ ಪದ್ಮನಾಭ ಕೊಟ್ಟಾರಿ, ಜಿ.ಪಂ. ಸದಸ್ಯ ಶ್ರೀ ಚೆನ್ನಪ್ಪ ಕೋಟ್ಯಾನ್, ತಾ. ಪಂ. ಉಪಾಧ್ಯಕ್ಷ ಶ್ರೀ ದಿನೇಶ್ ಅಮ್ಟೂರು ಮತ್ತು ವಸಂತ ಮಾಧವ ಉಪಸ್ಥಿತರಿದ್ದರು. 14 ಜಿಲ್ಲೆಗಳ 36 ತಂಡಗಳು ಭಾಗವಹಿಸಿದ್ದವು. ಕಿಶೋರ, ಬಾಲ ಹಾಗೂ ತರುಣ ವರ್ಗ ವಿಭಾಗಗಳಲ್ಲಿ ನಡೆದ ಪಂದ್ಯಾಟದಲ್ಲಿ ಸುಮಾರು 530ಕ್ಕೂ ಹೆಚ್ಚು ಕ್ರೀಡಾಪಟುಗಳು ಭಾಗವಹಿಸಿದ್ದ ಈ ಪಂದ್ಯಾಟದ ಸಮಾರೋಪವನ್ನು ಶ್ರೀ ಮೋನಪ್ಪ ಭಂಡಾರಿ (ವಿಧಾನಪರಿಷತ್ ಸದಸ್ಯರು) ನೆರವೇರಿಸಿ, ವಿಜೇತರಿಗೆ ಬಹುಮಾನವನ್ನು ನೀಡಿ ಗೌರವಿಸಿದರು.

# ಶಿಶುಮಂದಿರ ವಿಭಾಗ

## ಶ್ರೀಕೃಷ್ಣ ಲೋಕ



ಶ್ರೀರಾಮ ಭಜನಾ ಮಂದಿರದ ಆಶ್ರಯದಲ್ಲಿ ನಡೆದ ಶ್ರೀಕೃಷ್ಣಜನ್ಮಾಷ್ಟಮಿಯ ಶೋಭಾಯಾತ್ರೆಯಲ್ಲಿ ಶ್ರೀರಾಮ ಶಿಶುಮಂದಿರ ಹಾಗೂ ಪ್ರಾಥಮಿಕ ಶಾಲೆಯ ಸುಮಾರು 700ಜನ ಪುಟಾಣಿಗಳು ಶ್ರೀಕೃಷ್ಣನ ವೇಷ ಧರಿಸಿ ಭಾಗವಹಿಸಿದ್ದರು. ವಿವಿಧ ಸ್ತಬ್ಧಚಿತ್ರಗಳೊಂದಿಗೆ ನಡೆದ 'ಶ್ರೀಕೃಷ್ಣಲೋಕ' ಆ ಶೋಭಾಯಾತ್ರೆಯ ಆಕರ್ಷಣೆಯ ಕೇಂದ್ರವಾಗಿತ್ತು. ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಬಾಲಕೃಷ್ಣ ವೇಷಧಾರಿಯನ್ನು ತೊಟ್ಟಿನಲ್ಲಿಟ್ಟು ತೂಗಿ ಹಾಡಿ ಬೆಣ್ಣೆ ತಿನ್ನಿಸಿ ಜನ್ಮಾಷ್ಟಮಿಯನ್ನು ವೈಶಿಷ್ಟ್ಯವಾಗಿ ಆಚರಿಸಲಾಯಿತು. ಜೊತೆಗೆ ಮಾತೆಯರಿಂದ ಕೋಲಾಟದಂತಹ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಡಾ. ಕಮಲಾ ಭಟ್ ಹಾಗೂ ಶಿಶುಮಂದಿರದ, ಮಾತೃಮಂಡಳಿಯ ಸದಸ್ಯರು ಜೊತೆಗಿದ್ದರು.

## ರಕ್ಷಾ ಬಂಧನ

ಕಲ್ಲಡ್ಕದ ಶ್ರೀರಾಮ ಶಿಶುಮಂದಿರ, ಸಜಿಪದ ಶ್ರೀಕೃಷ್ಣ ಶಿಶುಮಂದಿರ ಹಾಗೂ ಬೊಂಡಾಲದ ಶ್ರೀಗಣೇಶ ಶಿಶುಮಂದಿರದ ಪುಟಾಣಿಗಳು ಮಾತಾಜಿಯವರೊಂದಿಗೆ ರಕ್ಷಾಬಂಧನವನ್ನು ಅನೇಕ ಕಡೆಗಳಲ್ಲಿ ಆಚರಿಸಿದರು. ದೇವಸ್ಥಾನ, ಮಾತೃಮಂಡಳಿ, ಅಂಗನವಾಡಿ, ಬಾಲಗೋಕುಲ, ಬ್ಯಾಂಕ್, ಅಂಗಡಿ, ಸರ್ಕಾರಿ ಕಚೇರಿ, ಹೀಗೆ ಒಟ್ಟು 3000ಕ್ಕೂ ಹೆಚ್ಚು ವ್ಯಕ್ತಿಗಳನ್ನು ಸಂಪರ್ಕಿಸಿ ರಕ್ಷೆ ಕಟ್ಟಿ ಶುಭಾಶಯ ಕೋರಿದರು.

ಪುಟಾಣಿಗಳು ರಕ್ಷೆ ಕಟ್ಟಲು ತೆರಳಿದಾಗ ರಕ್ಷೆಕಟ್ಟಿಸಿಕೊಂಡವರು ಸಹಜವೆಂಬಂತೆ ಚಾಕಲೇಟನ್ನು ನೀಡಿದಾಗ ಶಿಶುಮಂದಿರದ ಪುಟಾಣಿಗಳು ಚಾಕಲೇಟು ತಿನ್ನಬಾರದೆಂಬ ಮಾತಾಜಿಯ ಸೂಚನೆ ಮೇರೆಗೆ ಅದನ್ನು ಅಷ್ಟೇ ಸಹಜತೆಯಿಂದ, ವಿನಯದಿಂದಲೇ ತಿರಸ್ಕರಿಸಿದರು ಇವರ ಈ ಸೂಚನೆ ಪಾಲನೆಗೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದರು.

# ಪ್ರಾಥಮಿಕ ಶಾಲಾ ವಿಭಾಗ

## ರಕ್ಷಾಬಂಧನ ಮತ್ತು ಸಂಸ್ಕೃತೋತ್ಸವ




ಶ್ರೀರಾಮ ಪ್ರಾಥಮಿಕ ಶಾಲಾ ವಿಭಾಗದಲ್ಲಿ ರಕ್ಷಾಬಂಧನವು ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಪ್ರಾರಂಭಗೊಂಡು ವಿದ್ಯಾರ್ಥಿಗಳು ಪರಸ್ಪರ ಕೇಸರಿ ಬಣ್ಣದ ರಕ್ಷೆಯನ್ನು ಕಟ್ಟಿಕೊಂಡರು. ಶ್ರೀ ವಿನಾಯಕ ಶಂಕರನಾರಾಯಣ ದುರ್ಗಾಂಬ ದೇವಸ್ಥಾನ ನಂದಾವರ ಇಲ್ಲಿನ ಆಡಳಿತ ಮೊಕ್ತೇಸರರು ಶ್ರೀ ರಾಧಾಕೃಷ್ಣ ಆಳ್ವ ಮತ್ತು ಶ್ರೀರಾಮ ಪ್ರೌಢಶಾಲಾ ಅಧ್ಯಾಪಕರಾದ ಶ್ರೀ ಕೃಷ್ಣ ಇವರು ಶುಭ ಹಾರೈಸಿದರು.

ಇಡೀ ದೇಶ ನಮ್ಮ ದೇಹದ ಹಾಗೆ ದೇಹದ ಯಾವುದೇ ಒಂದು ಭಾಗಕ್ಕೆ ನೋವಾದರೂ ಇಡೀ ದೇಹ ಹೇಗೆ ಸ್ಪಂದಿಸುತ್ತದೆಯೋ ಹಾಗೆಯೇ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಲು ಪರಸ್ಪರ ರಕ್ಷಾಧಾರಣೆ ಮಾಡೋಣ. ಬಿಡಿಬಿಡಿಯಾದ ಎಳೆಗಳೆಲ್ಲವೂ ಜೊತೆಯಾಗಿದ್ದರೆ ಮಾತ್ರ ಅದು ರಕ್ಷೆಯಾಗುವುದು. ಇಲ್ಲಿ ಒಗ್ಗಟ್ಟಿನ ಸಂದೇಶವಿದೆ. ಅಂತಹ ರಕ್ಷೆಯನ್ನು ಧರಿಸೋಣ ಎಂದು ಮುಖ್ಯ ಅತಿಥಿ ಶ್ರೀಮತಿ ಕಮಲಾ ಪ್ರಭಾಕರ ಭಟ್ ಹೇಳಿದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ರವಿರಾಜ್ ಕಣಂತೂರು ಮತ್ತು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಸತೀಶ್ ಭಟ್ ಶಿವಗಿರಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಿದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ನಿವೇದಿತಾ ನಿರೂಪಿಸಿ, ದೀಕ್ಷಾ ಸ್ವಾಗತಿಸಿ, ಅನನ್ಯ ಧನ್ಯವಾದಗೈದಳು.

## ವಿಚಾರ ಸಂಕಿರಣದಲ್ಲಿ ಪಾಲ್ಗೊಳ್ಳುವಿಕೆ 25.08.2012



ಕ್ರೆಡಾಯ್ ಸ್ಟೇಟ್‌ಕಾನ್-2012 ಎಂಬ ಗೃಹ ನಿರ್ಮಾಣ ವಿಷಯದ ರಾಜ್ಯಮಟ್ಟದ ವಿಚಾರಸಂಕಿರಣ ಮಂಗಳೂರಿನ ಡಾ. ಟಿ.ಎಂ.ಎ.ಪೈ ಸಭಾಭವನದಲ್ಲಿ ನಡೆಯಿತು.

ಪದವಿ ವಿಭಾಗದ 11 ಮಂದಿ ವಿದ್ಯಾರ್ಥಿಗಳು ಹಾಗೂ ಪದವಿಪೂರ್ವ ವಿಭಾಗದ 14 ಮಂದಿ ವಿದ್ಯಾರ್ಥಿಗಳು ಮತ್ತು ಇಬ್ಬರು ಉಪನ್ಯಾಸಕರು ಭಾಗವಹಿಸಿದರು. ವಿದ್ಯಾಕೇಂದ್ರದ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಮನೋಜ್ ಉಳ್ಳಾಲ್ ಜೊತೆಗಿದ್ದರು.

## ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ




ದಿನಾಂಕ 25.08.012ರ ಶನಿವಾರದಂದು ವೇದವ್ಯಾಸ ಧ್ಯಾನಮಂದಿರದಲ್ಲಿ ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬ ಆಚರಣೆ ನಡೆಯಿತು. ಮಾತಾಜಿಯವರು ಹುಟ್ಟುಹಬ್ಬ ಆಚರಿಸಿಕೊಳ್ಳುವ ವಿದ್ಯಾರ್ಥಿಗಳಿಗೆ ಆರತಿ, ಅಕ್ಷತೆ, ತಿಲಕಧಾರಣೆ ಮಾಡಿದರು. ತದನಂತರ ಮಾತನಾಡಿದ ಶ್ರೀರಾಮ ಶಿಶುಮಂದಿರದ ಆಡಳಿತ ಮಂಡಳಿಯ ವ್ಯವಸ್ಥಾಪಕರು ಹಾಗೂ ಪೋಷಕರಾದ ಶ್ರೀಮತಿ ಸುಧಾ ಎಸ್. ಭಟ್ ಅವರು ಶ್ರದ್ಧಾ ನಿಧಿ ಅರ್ಪಣೆಯ ಹಾಗೂ ಹುಟ್ಟು ಹಬ್ಬ ಆಚರಣೆಯ ಮಹತ್ವವನ್ನು ತಿಳಿಸಿ ಶುಭ ಹಾರೈಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಲಾಭಿವೃದ್ಧಿ ಸಮಿತಿಯ ಕಾರ್ಯದರ್ಶಿಯಾದ ಶ್ರೀ ಜಯರಾಮ ರೈ ಮಕ್ಕಳಿಗೆ ಶುಭ ಹಾರೈಸಿದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದು, ಕಾರ್ಯಕ್ರಮದಲ್ಲಿ ದಿವ್ಯಾ ಮಾತಾಜಿ ಸ್ವಾಗತಿಸಿ, ಶೈನಿ ಮಾತಾಜಿ ನಿರೂಪಿಸಿ, ರೂಪಕಲಾ ಮಾತಾಜಿ ಧನ್ಯವಾದಗೈದರು.

## ಅಧ್ಯಯನ ಪ್ರವಾಸ 23-08-2012



ಶ್ರೀರಾಮ ಪ್ರಾಥಮಿಕ ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಶ್ರೀರಾಮ ವಿದ್ಯಾಕೇಂದ್ರದ ಸಹಸಂಸ್ಥೆಗಳಿಗೆ ಒಂದು ದಿನದ ಅಧ್ಯಯನ ಪ್ರವಾಸವನ್ನು ಕೈಗೊಂಡರು.

ಉಪ್ಪಿನಂಗಡಿ, ನೆಲ್ಯಾಡಿ, ಪಟ್ರಮೆಯಲ್ಲಿರುವ ಶ್ರೀರಾಮ ಶಾಲೆಗಳು ಹಾಗೂ ಕಡಬದ ಸರಸ್ವತಿ ವಿದ್ಯಾಲಯಗಳಿಗೆ ಈ ಸಂದರ್ಭದಲ್ಲಿ ಭೇಟಿಯಿತ್ತರು. ಸಂಚಾಲಕರಾದ ವೆಂಕಟ್ರಮಣ, ಶಾಲಾ ಚಟುವಟಿಕೆಗಳ ಬಗ್ಗೆ ವಿವರಣೆ ನೀಡಿದರು. ಅಲ್ಲದೇ ವಿವಿಧ ವಿದ್ಯಾ ಸಂಸ್ಥೆಗಳ ಪ್ರಮುಖರೂ ತಮ್ಮ ಸಂಸ್ಥೆಯ ಪರಿಚಯವನ್ನು ಮಾಡಿಕೊಟ್ಟರು.

ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನಕ್ಕೂ ಭೇಟಿ ನೀಡಲಾಯಿತು.

ಶಾಲಾಭಿವೃದ್ಧಿಯ ಸಮಿತಿಯ ಅಧ್ಯಕ್ಷರು, ಸದಸ್ಯರು, ಶಾಲಾ ಮುಖ್ಯೋಪಾಧ್ಯಾಯರು, ಶಿಶು ಮಂದಿರದ ಮಾತಾಜಿಯವರು ಈ ತಂಡದಲ್ಲಿದ್ದರು.

# ಪ್ರೌಢಶಾಲಾ ವಿಭಾಗ

## ರಕ್ಷಾಬಂಧನ



ಜಾತಿ, ಮತ, ಪಂಥ ಭೇದವಿಲ್ಲದೆ ಆಚರಿಸುವ ಈ ಹಬ್ಬ ರಾಷ್ಟ್ರೀಯತೆಯನ್ನು ಸಂಕೇತಿಸುತ್ತದೆ. ರಾಷ್ಟ್ರ ರಕ್ಷಣೆಗೆ ಪ್ರತಿಯೊಬ್ಬರು ಕಂಕಣ ಬದ್ಧರಾಗಬೇಕೆಂದು ರಕ್ಷಾಬಂಧನ ಸಂದೇಶವಾಗಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕರ್ತ ನಾರಾಯಣ ಭಂಡಾರಿ ಹೇಳಿದರು. ಅವರು ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯಲ್ಲಿ ರಕ್ಷಾಬಂಧನ ಉತ್ಸವದಲ್ಲಿ ಪಾಲ್ಗೊಂಡು ರಕ್ಷಾಬಂಧನದ ಮಹತ್ವವನ್ನು ತಿಳಿಸಿದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯ ವಸಂತ ಮಾಧವ, ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಪರಸ್ಪರ ರಕ್ಷೆ ಕಟ್ಟುವ ಮೂಲಕ ರಕ್ಷಾಬಂಧನದ ಸಂದೇಶ ಹಾಗೂ ಸಿಹಿಯನ್ನು ಹಂಚಿಕೊಂಡರು.

## ಸಂಸ್ಕೃತ ಸಪ್ತಾಹ



ಸಂಸ್ಕೃತ ಮೇಲ್ವರ್ಗದವರ ಭಾಷೆಯಲ್ಲ. ಅದು ಸರ್ವರ ಭಾಷೆಯಾಗಿತ್ತು. ರಾಮಾಯಣ, ಮಹಾಭಾರತ ಸಂಸ್ಕೃತದಲ್ಲಿ ರಚನೆಯಾಗಿದ್ದು ಅದನ್ನು ರಚಿಸಿದ ವಾಲ್ಮೀಕಿ ವೇದವ್ಯಾಸರು ಮೇಲ್ವರ್ಗದವರಲ್ಲ. ಸಂಸ್ಕೃತ-ಸಂಸ್ಕೃತಿ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಮುಖ್ಯಅತಿಥಿಯಾಗಿದ್ದ ಶ್ರೀನಿವಾಸ ಪಾಠ ಶಾಲೆಯ ಸಂಸ್ಕೃತಶಿಕ್ಷಕ ಶ್ರೀ ಅನಂತರಾಮರಾವ್ ನುಡಿದರು. ಸಂಸ್ಕೃತಶಿಕ್ಷಕ ಜಯರಾಮ ಸಂಸ್ಕೃತಸಪ್ತಾಹದ ಬಗ್ಗೆ ಮಾತನಾಡಿದರು. ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನ ನೀಡಲಾಯಿತು. ವಿದ್ಯಾರ್ಥಿಗಳಾದ ಇಂದುಶ್ರೀ, ಸತ್ಯಶ್ಯಾಮ, ಶಶಿಪ್ರಭಾ ಕಾರ್ಯಕ್ರಮ ಸಂಯೋಜಿಸಿದರು.

## ಸಾಮೂಹಿಕ ಹುಟ್ಟುಹಬ್ಬ–ಭಜನೆ (25–08–2012)



ಆಗಸ್ಟ್ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳ ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನಾ ಕಾರ್ಯಕ್ರಮವನ್ನು ಏರ್ಪಡಿಸಿ, ಭಜನೆಯ ನಂತರ ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಮುಖ್ಯ ಅತಿಥಿಯವರಾದ ಕಡೇಶಿವಾಲಯದ ಶ್ರೀ ಕೃಷ್ಣಪ್ಪ ಕುಲಾಲ್ ಮಾತನಾಡಿ "ಶ್ರೀರಾಮ ಶಾಲೆಯಲ್ಲಿರುವ ಶಿಸ್ತು, ಸಂಯಮ, ಆಚಾರ ವಿಚಾರ ವಿಶಿಷ್ಟವಾದುದು ಸಂಸ್ಕೃತಿ ಸಂಸ್ಕಾರ ಇಲ್ಲಿ ಸಮುದ್ರದಷ್ಟು ವಿಶಾಲ ಮತ್ತು ಆಳವಾಗಿದೆ ಎಂದರು.

ಹುಟ್ಟುಹಬ್ಬವನ್ನು ಆಚರಿಸುವ ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಅತಿಥಿಗಳಿಂದ ತಿಲಕಧಾರಣೆ ಮಾಡಿಸಿಕೊಂಡು ಹುಟ್ಟುಹಬ್ಬವನ್ನು ಆಚರಿಸಿಕೊಂಡರು.

ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು. ಚೈತ್ರ ಅಡಿಗ(10) ಸ್ವಾಗತಿಸಿ, ಭವ್ಯಾ (10ಓಬವ್ವ) ವಂದಿಸಿ, ಸತ್ಯಶ್ಯಾಮ (9 ನಿವೇದಿತಾ) ನಿರೂಪಿಸಿದರು.

---

ದಿನಾಂಕ 13 ಮತ್ತು 14ರಂದು R.T.E ನೋಂದಾವಣೆ ಕಾರ್ಯ ಶ್ರೀರಾಮ ಪ್ರೌಢಶಾಲೆಯ ಗಣಕ ವಿಭಾಗದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ನೇತೃತ್ವದಲ್ಲಿ ನಡೆಯಿತು. ಒಟ್ಟು 20 ಜನರಂತೆ 2ದಿವಸ ಈ ಕೆಲಸವು ಸುಸೂತ್ರವಾಗಿ ನಡೆಸಲ್ಪಟ್ಟಿತು. ಅವರೊಂದಿಗೆ ಶಿಕ್ಷಣ ಸಂಯೋಜಕರಾದ ಶ್ರೀ ದೇವದಾಸ ಮತ್ತು ಶ್ರೀ ರಮಾನಾಂದ ಇವರು ಇದರಲ್ಲಿ ಭಾಗವಹಿಸಿದ್ದರು.

---

## ಅಂಚೆ ಚೀಟಿ ಪ್ರದರ್ಶನ (10–08–2012)



ಮಧುಕರ ಸಭಾಂಗಣದಲ್ಲಿ ನಡೆದ ಅಂಚೆ ಚೀಟಿ ಪ್ರದರ್ಶನ ಮತ್ತು ಕಾರ್ಯಗಾರವನ್ನು ಪುತ್ತೂರು ವಿಭಾಗದ ಹಿರಿಯ ಅಂಚೆ ನಿರ್ದೇಶಕರಾದ ಟ.ಜಿ.ನಾಯಕ್ ದೀಪ ಬೆಳಗುವುದರ ಮೂಲಕ ಉದ್ಘಾಟಿಸಿದರು. ಸಂತ ಫಿಲೋಮಿನಾ ಪ್ರೌಢಶಾಲೆಯ ಚಿತ್ರಕಲಾ ಶಿಕ್ಷಕರಾದ ಪುರುಷೋತ್ತಮ ತರಬೇತಿಯನ್ನು ಅಂಚೆ–ಚೀಟಿ ಪ್ರದರ್ಶಿಸುವುದರ ಮೂಲಕ ನಡೆಸಿಕೊಟ್ಟರು. ವಿದ್ಯಾಕೇಂದ್ರದ ಸಂಚಾಲಕರಾದ ಡಾ. ಪ್ರಭಾಕರ ಭಟ್ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಅಂಚೆ ಇಲಾಖಾ ಅಧಿಕಾರಿ ಶ್ರೀ ರಾಜೇಶ್, ಶ್ರೀ ಧನಂಜಯ, ಕಲ್ಲಡ್ಕ ಅಂಚೆ ಪಾಲಕರಾದ ಶ್ರೀ ಇಸ್ಮಾಯಿಲ್ ಉಪಸ್ಥಿತರಿದ್ದರು. ಪ್ರಶಾಂತ್ ಸ್ವಾಗತಿಸಿ, ಜಯಾನಂದ ಪೆರಾಜೆ ವಂದಿಸಿದರು.

## ಸೈಕಲ್ ವಿತರಣೆ



ಪ್ರೌಢಶಾಲಾ ವಿಭಾಗದ 8ನೇ ತರಗತಿಯ 249 ವಿದ್ಯಾರ್ಥಿಗಳಿಗೆ ಸರಕಾರದಿಂದ ಒದಗಿಸಲಾದ ಸೈಕಲ್ ಗಳನ್ನು ಆಗಸ್ಟ್ 17ರಂದು ವಿತರಿಸಲಾಯಿತು.

ಶಾಲಾ ಸಂಚಾಲಕರಾದ ಡಾ। ಪ್ರಭಾಕರ ಭಟ್, ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ, ಮಾಜಿ ಶಾಸಕ ಶ್ರೀ ಪದ್ಮನಾಭ ಕೊಟ್ಟಾರಿ, ಜಿ. ಪಂ. ಸದಸ್ಯ ಶ್ರೀ ಚೆನ್ನಪ್ಪ ಕೋಟ್ಯಾನ್, ತಾ. ಪಂ. ಉಪಾಧ್ಯಕ್ಷ ಶ್ರೀ ದಿನೇಶ್ ಅಮ್ಟೂರು ಮತ್ತು ಮುಖ್ಯೋಪಾಧ್ಯಾಯ ಶ್ರೀ ವಸಂತ ಮಾಧವ ಉಪಸ್ಥಿತರಿದ್ದು ಸೈಕಲ್ ವಿತರಣೆ ಮಾಡಿದರು.

---

## ಬಂಟ್ವಾಳ ತಾಲೂಕು ಯೋಗಾಸನ ಸ್ಪರ್ಧೆ



ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯಲ್ಲಿ ದಿನಾಂಕ 14.08.2012ರಂದು ಬಂಟ್ವಾಳ ತಾಲೂಕು ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಬಂಟ್ವಾಳ ತಾಲೂಕು ಮಟ್ಟದ ಯೋಗಾಸನ ಸ್ಪರ್ಧೆ ನಡೆಯಿತು.

ಕಳೆದ ಜುಲೈ ತಿಂಗಳಲ್ಲಿ ಶ್ರೀಲಂಕಾದ ಕೊಲಂಬೋದಲ್ಲಿ ನಡೆದ ಅಂತರಾಷ್ಟ್ರೀಯ ಕ್ರೀಡಾಕೂಟದಲ್ಲಿ ಹಿರಿಯ ನಾಗರಿಕರ ವಿಭಾಗ (55ವರ್ಷ ಮೇಲಿನ) ದಲ್ಲಿ ಜಾವೆಲಿನ್ ಎಸೆತದಲ್ಲಿ ಕಂಚಿನ ಪದಕ ಪಡೆದ ನಮ್ಮ ನಾಡಿನ ಹೆಮ್ಮೆಯ ಕ್ರೀಡಾಪಟು ಬಂಟ್ವಾಳ ತಾಲೂಕಿನ ಕಲ್ಲಡ್ಕ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶಾ.ಶಿ.ಶಿಕ್ಷಕರಾದ ಶ್ರೀ ಶಂಕರ ವಿ.ಯವರು ಸ್ಪರ್ಧೆಯನ್ನು ದೀಪಬೆಳಗಿಸಿ, ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಉದ್ಘಾಟಿಸಿದರು.

ಶ್ರೀರಾಮ ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀ ವಸಂತಮಾಧವ ಮಾರ್ಗದರ್ಶನ ಮಾಡಿದರು. ಸರಸ್ವತಿ ವಂದನಾ ಮೂಲಕ ಪ್ರಾರಂಭಗೊಂಡ ಸಮಾರಂಭದಲ್ಲಿ ಪ್ರೌಢಶಾಲೆಯ ರಾಧಾಕೃಷ್ಣ ಅಡ್ಯಂತಾಯ(ಶಾ.ಶಿ.ಶಿ.) ಸ್ವಾಗತಿಸಿ ಕು। ಮೃದುಲಾ ಮಾತಾಜಿ ವಂದಿಸಿದರು. ಶ್ರೀ ರಾಜೇಶ್ (ಯೋಗ ಶಿಕ್ಷಕ) ಕಾರ್ಯಕ್ರಮ ನಿರ್ವಹಿಸಿದರು. ಬಂಟ್ವಾಳ ತಾಲೂಕು ಶಾ.ಶಿ.ಶಿ. ಸಂಘದ ಅಧ್ಯಕ್ಷ ಶ್ರೀ ನವೀನ, ಕಾರ್ಯದರ್ಶಿ ಶ್ರೀ ಜನಾರ್ದನ, ಸಂಘದ ನಿಕಟಪೂರ್ವ ಅಧ್ಯಕ್ಷ ಶ್ರೀ ಗಂಗಾಧರ ರೈ ಮಾಣಿ, ಸರಕಾರಿ ನೌಕರರ ಸಂಘದ ಪ್ರತಿನಿಧಿ ಶ್ರೀ ಸುರೇಶ ಶೆಟ್ಟಿ ಕೇಪು, ಯೋಗಾಸನದ ತೀರ್ಪುಗಾರರಾದ ಶ್ರೀ ವೆಂಕಟೇಶ ದಾಮ್ಲೆ, ಶ್ರೀ ಜಗದೀಶ ಬಾಳ್ತಿಲ, ಶ್ರೀ ಚೆನ್ನಕೇಶವ ಪೆರ್ನೆ, ಶ್ರೀಮತಿ ಗೀತಾ ಮತ್ತಿತರರು ಉಪಸ್ಥಿತರಿದ್ದರು.

# ಪದವಿಪೂರ್ವ ವಿಭಾಗ

## ಸಂಸ್ಕೃತ ಸಪ್ತಾಹ–ರಕ್ಷಾ ಬಂಧನ 6.8.2012




ಭಾರವಿ ಸಂಸ್ಕೃತ ಸಂಘ ಹಾಗೂ ಸಂಸ್ಕೃತಭಾರತಿ ಇದರ ಜಂಟೀ ಆಶ್ರಯದಲ್ಲಿ ಸಂಸ್ಕೃತ ಸಪ್ತಾಹ ಮತ್ತು ರಕ್ಷಾಬಂಧನ ಕಾರ್ಯಕ್ರಮ ನಡೆಯಿತು.

ಸಪ್ತಾಹದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಂಸ್ಕೃತ ಕಾವ್ಯವಾಚನ, ಸಮೂಹ ಗೀತೆ, ಪ್ರಬಂಧ, ವಸ್ತುಗಳ ಹೆಸರನ್ನು ಸಂಸ್ಕೃತದಲ್ಲಿ ಗುರುತಿಸುವ ಸ್ಪರ್ಧೆ ಇತ್ಯಾದಿಗಳನ್ನು ಆಯೋಜಿಸಲಾಗಿತ್ತು. ಸಂಘದ ವಿದ್ಯಾರ್ಥಿಗಳು ಆಯೋಜಿಸಿದ್ದ "ಸಂಸ್ಕೃತ–ವಿಜ್ಞಾನ–ವಸ್ತು ಪ್ರದರ್ಶನ' ಎಲ್ಲರ ಗಮನ ಸೆಳೆಯಿತು.

ಸಮಾರೋಪ ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯಕ್ಷೇತ್ರೀಯ ಬೌದ್ಧಿಕ್ ಪ್ರಮುಖರಾದ ಶ್ರೀ ವಿ. ನಾಗರಾಜ ಇವರು ಮಾತನಾಡಿ 'ಸಂಸ್ಕೃತ–ಜಗತ್ತಿನ ಹಲವು ಭಾಷೆಗಳ ಮೂಲ, ಹಲವು ಭಾಷೆಗಳಿಗೆ ಪ್ರೇರಣೆ ನೀಡಿದ ಅತ್ಯಂತ ಪುರಾತನವಾದ, ಶ್ರೇಷ್ಠ ಭಾಷೆ ಎಂದರು. ಅಲ್ಲದೆ ತ್ಯಾಗದ ಪ್ರತೀಕವಾದ ಕೇಸರಿ ಬಣ್ಣದ ರಕ್ಷೆಯನ್ನು ಕಟ್ಟುವುದರ ಜೊತೆಜೊತೆಗೆ ಹಿಂದೂ ಬಾಂಧವರಲ್ಲಿ ನಾವು ಸಹೋದರರು ಎನ್ನುವ ಭಾವನೆ ಮೂಡಬೇಕು. ಜಾತಿ–ಜಾತಿಗಳ ಹೆಸರಲ್ಲಿ ಪರಸ್ಪರ ಕಚ್ಚಾಡದೆ, ನಾವೆಲ್ಲ ಒಂದೇ ಎನ್ನುವುದನ್ನು ಜಗತ್ತಿಗೆ ತೋರಿಸುವುದು ಇಂದಿನ ಅಗತ್ಯವಾಗಿದೆ." ಎನ್ನುವ ಸಂದೇಶ ನೀಡಿದರು. ಪ್ರಾಂಶುಪಾಲ ಶ್ರೀ ಕೃಷ್ಣಪ್ರಸಾದ ಇವರು ಉಪಸ್ಥಿತರಿದ್ದರು. ಸಂಸ್ಕೃತ ಸಂಘದ ಅಧ್ಯಕ್ಷ ರಾಜ್‌ಗೋಪಾಲ್ (ದ್ವಿ. ವಾಣಿಜ್ಯ) ಸ್ವಾಗತಿಸಿ, ಸಂಘದ ನಿರ್ದೇಶಕಿ ಶಶಿಕಲಾ ವಂದಿಸಿದರು. ವಿದ್ಯಾರ್ಥಿಸಂಘದ ಸಿಂಧುಶ್ರೀ (ದ್ವಿ.ವಿಜ್ಞಾನ) ನಿರೂಪಿಸಿದರು.

## ಪೋಷಕರ ಸಭೆ



ಶ್ರೀರಾಮ ಪದವಿ ಪೂರ್ವ ವಿದ್ಯಾಲಯ ಇಲ್ಲಿ ದಿನಾಂಕ 21.08.2012ನೇ ಮಂಗಳವಾರದಂದು ಪೋಷಕರ ಸಭೆ ನಡೆಯಿತು. ಅಜಿತ ಕುಮಾರ್ ಸಭಾಭವನದಲ್ಲಿ ನಡೆದ ಈ ಸಭೆಯಲ್ಲಿ 500ಕ್ಕಿಂತಲು ಮೇಲ್ಪಟ್ಟು ಪೋಷಕರು ಭಾಗವಹಿಸಿದರು.

ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಕೃಷ್ಣಪ್ರಸಾದ್ ಇವರು ಪಾಸ್ತಾವಿಕವಾಗಿ ಮಾತನಾಡಿ ಕಳೆದ ವರ್ಷದ ಫಲಿತಾಂಶ ಈ ಶೈಕ್ಷಣಿಕ ವರ್ಷದ ದಾಖಲಾತಿಯ ಅಂಕಿಅಂಶ, ವಾರ್ಷಿಕ ಯೋಜನೆಯ ಬಗ್ಗೆ ತಿಳಿಸಿದರು. ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ತಮ್ಮ ಮಕ್ಕಳ ಶೈಕ್ಷಣಿಕ ಕುಂದುಕೊರತೆಗಳ ಬಗ್ಗೆ, ಸಂಸ್ಥೆಯ ಸಂಚಾಲಕರಾದ ಡಾ। ಪ್ರಭಾಕರ ಭಟ್ ಇವರು ಸಂಸ್ಥೆಯನ್ನು ಪ್ರಾರಂಭಿಸಿದ ಉದ್ದೇಶ, ಹಿನ್ನಲೆ, ಪ್ರಸ್ತುತ ಸಮಾಜದಲ್ಲಿ ವಿದ್ಯಾರ್ಥಿಗಳ ಪಾತ್ರ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿದರು ಭಾರತೀಯ ಸೇನೆಯಲ್ಲಿ ಹದಿನೈದು ವರ್ಷಗಳ ಸೇವೆ ಸಲ್ಲಿಸಿರುವ ಶ್ರೀ ಶ್ರೀಪ್ರಕಾಶ ವಿಟ್ಲ ಇವರು ಮುಖ್ಯ ಅತಿಥಿ–ಯಾಗಿದ್ದು, ಸೇನೆಯಲ್ಲಿನ ಅವಕಾಶಗಳು, ಸವಲತ್ತುಗಳು ಮತ್ತು ಯುವಜನತೆ ಸೇನೆಗೆ ಸೇರಬೇಕಾದ ಅನಿವಾರ್ಯತೆಗಳ ಬಗೆಗೆ ನೆರೆದಿದ್ದ ಪೋಷಕರಿಗೆ ತಿಳಿಸಿ ಮನದಟ್ಟು ಮಾಡಿದರು.

ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ನಾರಾಯಣ ಸೋಮಯಾಜಿ, ಪ್ರಾಚಾರ್ಯರಾದ ಶ್ರೀ ಮಹೇಶ್ವರ ಭಟ್ ಹಾಗೂ ಎಲ್ಲಾ ಉಪನ್ಯಾಸಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಸುಷ್ಮಾ ಮಾತಾಜಿ ಸ್ವಾಗತಿಸಿ, ಅಮೃತಾ ವಂದಿಸಿದ ಈ ಕಾರ್ಯಕ್ರಮವನ್ನು ಲೀಲಾವತಿ ಮಾತಾಜಿ ನಿರೂಪಿಸಿದರು.

## ಭೂಮಿಕಾ ಪರಿಸರ ಸಂಘ–ಕೊಲಾಜ್ ಸ್ಪರ್ಧೆ 8.8.2012

ಶ್ರೀರಾಮ ಪ.ಪೂ ವಿದ್ಯಾಲಯ ಇಲ್ಲಿ ದಿನಾಂಕ ಬುಧವಾರದಂದು "ಭೂಮಿಕಾ" ಪರಿಸರ ಸಂಘದ ವತಿಯಿಂದ ಜಲಸಂರಕ್ಷಣೆ ಎಂಬ ವಿಷಯವನ್ನಿಟ್ಟುಕೊಂಡು ಕೊಲಾಜ್ ತಯಾರಿಸುವ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು. ಇದರಲ್ಲಿ ಲಿಖಿತಾ ಮತ್ತು ತಂಡ ಪ್ರಥಮ ಹಾಗೂ ಸುಶ್ಮಿತಾ ಮತ್ತು ತಂಡ ದ್ವಿತೀಯ ಸ್ಥಾನವನ್ನು ಪಡೆದುಕೊಂಡರು. ತೀರ್ಪುಗಾರರಾಗಿ ಉಪನ್ಯಾಸಕರಾದ ಮಹೇಶ್, ವಸಂತ ಬಲ್ಲಾಳ್, ರೇವತಿ ಸಹಕರಿಸಿದರು.

## ಯೋಗಾಸನ – ಕ್ಷೇತ್ರೀಯ ಮಟ್ಟಕ್ಕೆ ಆಯ್ಕೆ 11.08.2012

ಬೆಳಗಾವಿಯಲ್ಲಿ ನಡೆದ ಪ್ರಾಂತ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಶ್ರೀರಾಮ ಪ.ಪೂ ವಿದ್ಯಾಲಯದ ಅಭಿಷೇಕ್ ಕುಮಾರ್ ಬಿ.(ಪ್ರ.ವಿಜ್ಞಾನ) ದ್ವಿತೀಯ ಸ್ಥಾನವನ್ನು ಶ್ರೀ ಗಣೇಶ್ ಪಿ. (ಪ್ರ.ವಿಜ್ಞಾನ) ತೃತೀಯ ಸ್ಥಾನವನ್ನು ಗಳಿಸಿ ಚೆನ್ನೈಯಲ್ಲಿ ನಡೆಯುವ ಕ್ಷೇತ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿರುತ್ತಾರೆ.

## ಥ್ರೋ–ಬಾಲ್ ಪಂದ್ಯಾಟ ದ್ವಿತೀಯ ಸ್ಥಾನ

ವಿದ್ಯಾಭಾರತಿ ಕರ್ನಾಟಕ ಇದರ ವತಿಯಿಂದ ದಿನಾಂಕ 11.8.2012ರಂದು ವಿವೇಕಾನಂದ ಕನ್ನಡ ಮಾಧ್ಯಮ ಶಾಲೆ ತೆಂಕಿಲ ಇಲ್ಲಿ ನಡೆದ ಜಿಲ್ಲಾ ಮಟ್ಟದ ಥ್ರೋಬಾಲ್ ಸ್ಪರ್ಧೆಯಲ್ಲಿ ಪ.ಪೂ ವಿದ್ಯಾಲಯದ ಬಾಲಕರ ಮತ್ತು ಬಾಲಕಿಯರು ದ್ವಿತೀಯ ಸ್ಥಾನ ಪಡೆದಿರುತ್ತಾರೆ.

## ಪ್ರಾಂತಮಟ್ಟದ ಕಬಡ್ಡಿ 17–8–2012

ವಿದ್ಯಾಭಾರತಿ ಕರ್ನಾಟಕ ಇದರ ಪ್ರಾಂತ ಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಶ್ರೀರಾಮ ಪ.ಪೂ ವಿದ್ಯಾಲಯ ವಿದ್ಯಾರ್ಥಿಗಳು ಭಾಗವಹಿಸಿದ್ದು, ತರುಣ ವರ್ಗದ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾರೆ. ಇವರು ಸೆಪ್ಟೆಂಬರ್ 7, 8, 9ರಂದು ಕೇರಳದ ಕಲ್ಲಿಕೋಟೆಯಲ್ಲಿ ನಡೆಯುವ ಕ್ಷೇತ್ರೀಯ ಮಟ್ಟದ ಪಂದ್ಯಾಟಕ್ಕೆ ಆಯ್ಕೆಯಾಗಿರುತ್ತಾರೆ.

## 'ಭಾಸ್ಕರಾಚಾರ್ಯ' ವಿಜ್ಞಾನ ಸಂಘ: ರಕ್ತದ ಗುಂಪು ವರ್ಗೀಕರಣ ಶಿಬಿರ



ವಿಜ್ಞಾನ ಸಂಘದ ವತಿಯಿಂದ ದಿನಾಂಕ 15.08.2012ರಂದು ರಕ್ತದ ಗುಂಪು ವರ್ಗೀಕರಿಸುವ ಶಿಬಿರವನ್ನು ಆಯೋಜಿಸಲಾಗಿತ್ತು. ಸಂಘದ ನಿರ್ದೇಶಕಿಯಾದ ಕುಮಾರಿ ಅಮೃತಾ ಮಾತಾಜಿಯವರ ಮಾಗದರ್ಶನದಲ್ಲಿ ನಡೆದ ಈ ಶಿಬಿರವನ್ನು ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಸುಮಾರು 350 ವಿದ್ಯಾರ್ಥಿಗಳು, ಉಪನ್ಯಾಸಕರು ಇದರ ಸದುಪಯೋಗ ಪಡೆದುಕೊಂಡರು ಸುಧಾ ಮಾತಾಜಿ, ಜಯಲಕ್ಷ್ಮೀ ಮಾತಾಜಿ ಹಾಗೂ ಗಾಯತ್ರಿ ಮಾತಾಜಿ ಜೊತೆಗಿದ್ದು ಮಾರ್ಗದರ್ಶನ ಮಾಡಿದರು.

## ಭಾವನಾ ಸಾಂಸ್ಕೃತಿಕ ಸಂಘ: ತಿಂಗಳ ಭಜನೆ

ಕಾಲೇಜಿನ ಭಾವನಾ ಸಾಂಸ್ಕೃತಿಕ ಸಂಘವು ನಡೆಸಿಕೊಂಡು ಬರುತ್ತಿರುವ ಭಜನಾ ಕಾರ್ಯಕ್ರಮವು ಈ ತಿಂಗಳ 24.08.2012ರ ಶುಕ್ರವಾರದಂದು ಅಜಿತಕುಮಾರ್ ಸಭಾಭವನದಲ್ಲಿ ನಡೆಯಿತು. ಇದನ್ನು ದ್ವಿತೀಯ ವಾಣಿಜ್ಯ(ಬಿ) ವಿಭಾಗದ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಈ ತಿಂಗಳಲ್ಲಿ ಹುಟ್ಟುಹಬ್ಬವನ್ನು ಆಚರಿಸಿದ ವಿದ್ಯಾರ್ಥಿಗಳು ಸಮರ್ಪಣಾ ನಿಧಿಯನ್ನು ಅರ್ಪಿಸಿದರು.

## ಸಾಂಸ್ಕೃತಿಕ ಕಾರ್ಯಕ್ರಮ 15.08.2012

ವಿದ್ಯಾರ್ಥಿಗಳ ಪ್ರತಿಭೆಗಳನ್ನು ಗುರುತಿಸುವ ಕಾರ್ಯಕ್ರಮದ ಸರಣಿಯಲ್ಲಿ



ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ವಿವಿಧ ಪ್ರಕಾರಗಳ ನೃತ್ಯ, ನಾಟಕಗಳ ಜೊತೆಗೆ ಸಮೂಹ ಗೀತೆಗಳನ್ನು ಹಾಡಿದರು. ರಾಜ್‌ಗೋಪಾಲ್ ಮತ್ತು ಮೋಹಿನಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

# ಪದವಿ ವಿಭಾಗ

## ರಕ್ಷಾಬಂಧನ ಕಾರ್ಯಕ್ರಮ 03.08.2012




ಅಜಿತಕುಮಾರ ಸಭಾಭವನದಲ್ಲಿ ಜರಗಿದ ರಕ್ಷಾಬಂಧನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ವಿದ್ಯಾಭಾರತಿಯ ಕ್ಷೇತ್ರೀಯ ಸಹ ಸಂಘಟನಾ ಕಾರ್ಯದರ್ಶಿ ಶ್ರೀಯುತ ಜಿ.ಆರ್.ಜಗದೀಶ ಇವರು ರಕ್ಷಾಬಂಧನದ ಮಹತ್ವದ ಕುರಿತು ಮಾತನಾಡುತ್ತಾ "ನಾವೆಲ್ಲರೂ ಒಟ್ಟಾಗಿ ರಕ್ಷೆಯನ್ನು ಕಟ್ಟಿಕೊಂಡರಷ್ಟೇ ಸಾಲದು, ಬದಲಾಗಿ ನಾವೆಲ್ಲರೂ ಒಟ್ಟಾಗಿ ದೇಶದ ಹಾಗೂ ನಮ್ಮ ಸಮಾಜದ ಸಮಸ್ಯೆಗಳ ಕುರಿತು ಚಿಂತಿಸಿ ಅವುಗಳ ಪರಿಹಾರಕ್ಕಾಗಿ ಶ್ರಮಿಸಬೇಕು ಎಂದರು. ತೃತೀಯ ಬಿ.ಬಿಎಯಂಃನ ಸಿದ್ಧಾಂತ್ ಸ್ವಾಗತಿಸಿ, ಸಹನಾ ಧನ್ಯವಾದಗೈದು, ರೇಶ್ಮಾ ಕಾರ್ಯಕ್ರಮ ನಿರೂಪಿಸಿದರು.

## ಪೋಷಕರ ಸಮಾವೇಶ: 13.08.2012



2012–13ನೇ ಶೈಕ್ಷಣಿಕ ವರ್ಷದ ಪೋಷಕರ ಸಮಾವೇಶದಲ್ಲಿ ವಾಯುಸೇನೆಯ ನಿವೃತ್ತ ಅಧಿಕಾರಿ ಶ್ರೀಯುತ ಶ್ರೀಪ್ರಕಾಶ್ ಇವರು ಮಿಲಿಟರಿ ಶಿಕ್ಷಣದ ಬಗೆಗೆ ಪೋಷಕರಿಗೆ ಮಾಹಿತಿ ನೀಡಿದರು. ವಾಣಿಜ್ಯ ಉಪನ್ಯಾಸಕಿ ಶ್ರೀಮತಿ ಕಾತ್ಯಾಯಿನಿ ವರದಿ ವಾಚಿಸಿದರು. ಸಂಸ್ಥೆಯ ಸಂಚಾಲಕರಾದ ಡಾ. ಪ್ರಭಾಕರ ಭಟ್ ಮತ್ತು ವಿದ್ಯಾರ್ಥಿಗಳ ಪೋಷಕರ ಸಂವಾದ ಜರುಗಿತು. ಪೋಷಕರು ತಮ್ಮ ಅನಿಸಿಕೆ, ಅಭಿಪ್ರಾಯ, ಸಲಹೆ ಸೂಚನೆಗಳನ್ನಿತ್ತರು. ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದು, ಕಾರ್ಯಕ್ರಮವನ್ನು ಕು. ಸುಜಾತ ಸ್ವಾಗತಿಸಿ, ಕು. ಶಕೀಲಾ ಧನ್ಯವಾದಗೈದು, ಶ್ರೀಮತಿ ವಿಜಯಲಕ್ಷ್ಮೀ ಕಾರ್ಯಕ್ರಮ ನಿರೂಪಿಸಿದರು.

## ಕ್ಷೇತ್ರ ಕಾರ್ಯ

ದಿನಾಂಕ 05.08.2012ನೇ ಆದಿತ್ಯವಾರ ಅಂತಿಮ ಪದವಿ ವಿಭಾಗದ ವಿದ್ಯಾರ್ಥಿನಿಯರ ತಂಡ ನರಹರಿ ಪರ್ವತ ಸದಾಶಿವ ದೇವಾಲಯದಲ್ಲಿ ಕ್ಷೇತ್ರ ಕಾರ್ಯ ನಡೆಸಿ ಅಲ್ಲಿನ ಇತಿಹಾಸದ ಬಗ್ಗೆ ಅಧ್ಯಯನ ನಡೆಸಿತು. ಅದೇ ದಿನ ವಿದ್ಯಾರ್ಥಿನಿಯರ ಇನ್ನೊಂದು ತಂಡ ತುಂಬೆ ವೆಂಟೆಡ್ ಡ್ಯಾಮ್ ಇಲ್ಲಿ ಕ್ಷೇತ್ರ ಕಾರ್ಯ ನಡೆಸಿ ಅಲ್ಲಿನ ನೀರಾವರಿ ಸರಬರಾಜು ಕಾರ್ಯಗಳ ವಿವಿಧ ವ್ಯವಸ್ಥೆಯ ಬಗ್ಗೆ ಅಧ್ಯಯನ ನಡೆಸಿತು.

ದಿನಾಂಕ 12.08.2012ನೇ ಆದಿತ್ಯವಾರ ಪದವಿ ವಿಭಾಗದ ಎಲ್ಲಾ ಅಂತಿಮ ಪದವಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ವರ್ಗದವರು ಶಂಭೂರು–ಸರಪಾಡಿ ವಿದ್ಯುತ್ ಉತ್ಪಾದನಾ ಘಟಕ ಇಲ್ಲಿಗೆ ಭೇಟಿ ನೀಡಿ ಅಲ್ಲಿನ ವಿವಿಧ ಕಾರ್ಯ ವೈಖರಿ ಕುರಿತು ಮಾಹಿತಿ ಸಂಗ್ರಹಿಸಿದರು.

ದಿನಾಂಕ 05.08.2012ನೇ ಆದಿತ್ಯವಾರ ವಿದ್ಯಾರ್ಥಿನಿಯರ ಇನ್ನೊಂದು ತಂಡ ಸ್ಥಳೀಯ ಪ್ರಗತಿಪರ ಕೃಷಿಕ ಶ್ರೀಯುತ ಆನಂದ ಶೆಟ್ಟಿಯವರ ಮನೆಗೆ ಭೇಟಿ ನೀಡಿ ಅವರನ್ನು ಸಂದರ್ಶನ ನಡೆಸಿತು. ಅಲ್ಲದೆ ಅವರ ಭತ್ತದ ವ್ಯವಸಾಯ ಭೂಮಿಯನ್ನು ಪರಿಶೀಲಿಸಿತು.

## ಚಿತ್ರ ನೋಡಿ ಶೀರ್ಷಿಕೆ ನೀಡಿ



ಹಿಂದಿನ ಸಂಚಿಕೆಯ ಚಿತ್ರಕ್ಕೆ ಆಯ್ಕೆಯಾದ ಶೀರ್ಷಿಕೆಗಳು :

1. ಸಾಗುತಿದೆ ಎತ್ತುಗಳ ಸವಾರಿ, ಅದರ ಮೇಲಿದೆ ಜೀವನದ ಅಂಬಾರಿ
(ಅನಿಲ್ ಕುಮಾರ್, ಕೃಷ್ಣಕೋಡಿ)
2. ಈ ಜೀವದ ಭಾರ ನಮ್ಮ ಜೀವನದ ಆಧಾರ
– ಶ್ರೀನಿಧಿ ಪ್ರಭು ( ಪ.ಪೂ ಪ್ರ.ವಿಜ್ಞಾನ)
3. ಬದುಕು ಜಟಕಾ ಬಂಡಿ ವಿಧಿ ಅದರ ಸಾಹೇಬ
– ಪೃಥ್ವೀರಾಜ (10ನೇ ದುರ್ಗಾವತಿ)
4. ಪ್ರೀತಿಯ ಕೂಳು ನೀಡಿದ ಯಜಮಾನನಿಗೆ ತನ್ನಯ ಬಾಳು
– ವಾಸವಿ ಬಳ್ಳುಕ್ಕುರಾಯ (9ನೇ ನಿವೇದಿತಾ)
5. ಬದುಕೆಂಬ ಬಂಡಿಯಲಿ ಸ್ವಾರ್ಥಮನುಜನಿಗೇಕೆ ?
ಅರ್ಥವಾಗದೇ ಈ ಮೂಕವೇದನೆ........?
–ಅನುಷಾ ಕೆ. (ದ್ವಿ.ಬಿ.ಬಿ.ಯಂ)
6. ಎತ್ತಾಗಿ ಏಕೆ ಹುಟ್ಟಿಹೆ ತಾಯೆ ಹೇಳು ? ಕತ್ತೆಗಿಂತಲೂ ಹೀನವಾಗಿಹುದು ಬಾಳು
–ಗಾಯತ್ರಿ ಕೆ., ಜೀವಶಾಸ್ತ್ರ (ಉಪನ್ಯಾಸಕಿ, ಪ.ಪೂ. ವಿಭಾಗ)




### "ಸರಯೂ" ಸಂಪಾದಕ ಮಂಡಳಿ

ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :
ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
ಸಹಸಂಪಾದಕರು :
ದಿವ್ಯಾ ಕುಮಾರಿ, ಸುಮಿತ್ರಾ ಎಸ್.ಜಿ., ಮೃದುಲಾ ಹೆಗ್ಡೆ,
ಮಹೇಶ ನೆಟ್ಲ, ಶಕೀಲಾ ಕುಮಾರಿ, ಜಯಾನಂದ ಪೆರಾಜೆ
ವ್ಯವಸ್ಥಾಪಕ ಸಂಪಾದಕರು :
ಸತೀಶ ಭಟ್, ಶಿವಗಿರಿ
ಕಾರ್ಯನಿರ್ವಾಹಕ ಸಂಪಾದಕರು :
ಕೃಷ್ಣಪ್ರಸಾದ ಕಾಯರ್‌ಕಟ್ಟೆ
ವಿನ್ಯಾಸ :
ಕುಶಾಲಪ್ಪ ಅಮ್ಟೂರು


"ಸರಯೂ" ಪತ್ರಿಕೆಯ ಬಗೆಗೆ ಹಾಗೂ ವಿದ್ಯಾಕೇಂದ್ರದ ಕಾರ್ಯಚಟುವಟಿಕೆಗಳ ಬಗ್ಗೆ ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಈ ಪತ್ರಿಕೆಯ ಪೋಷಕರಾಗಬಯಸುವವರು ರೂ. 1000/–ದ ಡಿ.ಡಿ./ಚೆಕ್‌ನ್ನು ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

**ಸಂಪಾದಕರು, ಸರಯೂ**
ಶ್ರೀರಾಮ ವಿದ್ಯಾಕೇಂದ್ರ, ಹನುಮಾನ್ ನಗರ, ಕಲ್ಲಡ್ಕ, ದ.ಕ.–574 222.

## ಸೋಣ ಸಂಬ್ರಮೊ 22.08.2012



'ಕದಿಕೆ' ತುಳು ಕೂಟದ ವತಿಯಿಂದ ಸೋಣ ಸಂಬ್ರಮೋ ಕಾರ್ಯಕ್ರಮ ಅಜಿತ ಕುಮಾರ ಸಭಾಭವನದಲ್ಲಿ ಜರುಗಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿ–ಯಾಗಿ ಆಗಮಿಸಿದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಶ್ರೀಯುತ ಉಮಾನಾಥ ಕೋಟ್ಯಾನ್ ಇವರು ವಿದ್ಯಾರ್ಥಿಗಳು ಆಯೋಜಿಸಿರುವ ತುಳು ಸಂಸ್ಕೃತಿಯನ್ನು ಬಿಂಬಿಸುವ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ನಮ್ಮ ದೇಶ ಪ್ರಪಂಚದಲ್ಲಿಯೇ ಅತ್ಯಂತ ಶ್ರೇಷ್ಠ ಸಂಸ್ಕೃತಿಯನ್ನು ಹೊಂದಿದೆ. ಅದರಲ್ಲಿಯೂ ತುಳುನಾಡಿನಷ್ಟು ಸಂಸ್ಕೃತಿ ಸಂಸ್ಕಾರಗಳನ್ನು ಬೇರೆಡೆ ಕಾಣಲು ಸಾಧ್ಯವಿಲ್ಲ. ಎಂದರು. ಹಿಂದಿನ ಕಾಲದಲ್ಲಿ ತುಳುವರಿಗೆ ಇದ್ದ ಆತ್ಮವಿಶ್ವಾಸ ಹಾಗೂ ಸ್ಥೈರ್ಯದ ಬಗ್ಗೆ ಮಾತನಾಡುತ್ತಾ ಇಂದು ತುಳುನಾಡಿನ ಯುವ ಪೀಳಿಗೆಗೆ ತಮ್ಮ ಪರಂಪರೆ ಅಥವಾ ಹಿರಿಯರು ಬಾಳಿ ಬದುಕಿದ ರೀತಿ ನೀತಿಗಳ ಅರಿವು ಇಲ್ಲದೇ ಇರುವುದು ವಿಷಾದನೀಯ ಎಂದರು.

ಇನ್ನೋರ್ವ ಅತಿಥಿ ಆಯುರ್ವೇದ ವೈದ್ಯ ಶ್ರೀ ಜ್ಞಾನೇಶ್ವರ್ ನಾಯಕ್ ಇವರು ತುಳು ನಾಡಿನ ಜನರು ಸೇವಿಸುವ ಅನೇಕ ಗೆಡ್ಡೆ ಗೆಣಸು ಸೊಪ್ಪು ತರಕಾರಿಗಳಲ್ಲಿ ಅತ್ಯುತ್ತಮ ಆಯುರ್ವೇದ ಔಷದೀಯ ಗುಣಗಳು ವಿದೇಶಿ ವೈದ್ಯ ಶಿಕ್ಷಣ ಪಡೆದವರಿಗೆ ಸರಿಗಾಣದಿರಬಹುದು ಆದರೆ ಇಲ್ಲಿನ ವಾತಾವರಣಕ್ಕೆ ಇದು ಅವಶ್ಯ ಎಂದರು. ಮಂಗಳೂರು ಕರಾವಳಿ ಸಮೂಹ ಸಂಸ್ಥೆಗಳ ಆಡಳಿತ ನಿರ್ದೇಶಕಿ ಶ್ರೀಮತಿ ಲತಾ ಜಿ.ರಾವ್ ಇವರು ವಿದ್ಯಾರ್ಥಿಗಳ ಸಂಸ್ಕೃತಿ–ಸಂಸ್ಕಾರಗಳ ಬಗೆಗೆ ಮೆಚ್ಚುಗೆ ವ್ಯಕ್ತಪಡಿಸಿದರು. ದ.ಕ. ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಶೈಲಜಾ ಜಿ.ಕೆ. ಭಟ್, ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿ, ಶ್ರೀ ಚೆನ್ನಪ್ಪ ಕೋಟ್ಯಾನ್, ಸಂತೋಷ್ ಬೋಳ್ಯಾರ್, ಸಂಸ್ಥೆಯ ಸಂಚಾಲಕರು, ಅಧ್ಯಕ್ಷರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಸಂವಾದ ಕೂಟ 25.08.2012

ಮಂಗಳೂರಿನ ಪುರಭವನದಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಇವರು ನಡೆಸಿದ "ತುಳು ಭಾಷೆಯ ಬೆಳವಣಿಗೆಯಲ್ಲಿ ವಿದ್ಯಾರ್ಥಿಗಳು" ಎನ್ನುವ ಸಂವಾದ ಕೂಟದಲ್ಲಿ ಪದವಿ ವಿಭಾಗದ 6 ಮಂದಿ ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಭಾಗವಹಿಸಿದರು.

ಸವಿಧೇ ತೆರೆದ ಅಂಚೆ

...............................................................

...............................................................

...............................................................